13-3-25
56-0-155

**ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ರಾಮೋಜಿ ಗೌಡ ಇವರ ಶೂನ್ಯ ವೇಳೆಯ ಪ್ರಶ್ನೆಗೆ ಸರ್ಕಾರದ ಉತ್ತರ**

**ವಿಷಯ:**

ದಿನಾಂಕ: 12.03.2025ರ ಪ್ರಜಾವಾಣಿ ದಿನ ಪತ್ರಿಕೆ ಶೀರ್ಷಿಕೆಯಲ್ಲಿ ಪ್ರಸ್ತಾಪವಾಗಿರುವಂತೆ, ಬೆಂಗಳೂರು ನಗರ ಯಶವಂತಪುರದಿಂದ ಮತ್ತಿಕೆರೆಗೆ ತೆರಳುವ "ಎಂ.ಎಸ್. ರಾಮಯ್ಯ" ರಸ್ತೆಯಲ್ಲಿ ನಡೆಯುತ್ತಿರುವ ಕೊಳವೆ ಅಳವಡಿಕೆ ಕಾಮಗಾರಿಯಿಂದ ರಸ್ತೆ ಹಾಳಾಗಿದ್ದು, ಇದರಿಂದ ವಾಹನ ಸಂಚಾರಕ್ಕೆ ತೊಂದರೆಯಾಗುತ್ತಿರುವುದು ಮಾತ್ರವಲ್ಲದೇ, ರಸ್ತೆ ಧೂಳುಮಯವಾಗಿದ್ದು, ಸಾರ್ವಜನಿಕರಿಗೆ ಆರೋಗ್ಯಕ್ಕೆ ತೊಂದರೆ ಉಂಟಾಗುತ್ತಿರುವುದು ಕಂಡುಬಂದಿರುತ್ತದೆ. ಕೊಳವೆಗಳನ್ನು ಅಳವಡಿಸಲು ಅಲ್ಲಲ್ಲೇ ರಸ್ತೆಯನ್ನು ಅಗೆದು ಮುಚ್ಚಲಾಗಿದ್ದು, ಅಲ್ಲಲ್ಲೇ ತಗ್ಗುಗಳು ಕಂಡುಬಂದಿದ್ದು, ಆಂಬುಲೆನ್ಸ್ ಸಂಚಾರಕ್ಕೆ ತೀರಾ ತೊಂದರೆ ಉಂಟಾಗುತ್ತಿರುತ್ತದೆ. ಇದರಿಂದ ಹಲವು ರೋಗಿಗಳಿಗೆ ಸಮಸ್ಯೆಯಾಗುತ್ತಿದ್ದು, ಸರಿಯಾದ ಸಮಯಕ್ಕೆ ಆಸ್ಪತ್ರೆ ತಲುಪದೇ, ರೋಗಿಗಳಿಗೆ ತೊಂದರೆ ಆಗುವ ಸಾಧ್ಯತೆ ಹೆಚ್ಚಿದೆ. ಈ ರಸ್ತೆಯು ರಾಮಯ್ಯ ಆಸ್ಪತ್ರೆಯ ಹಿಂಬದಿಯ ರಸ್ತೆಯಾಗಿದ್ದು, ಯಶವಂತಪುರದ ಮೂಲಕ ಈ ಆಸ್ಪತ್ರೆಗೆ ಬರುವ ಎಲ್ಲಾ ಆಂಬ್ಯುಲೆನ್ಸ್‌ಗಳು ಇದೇ ದಾರಿಯನ್ನು ಬಳಸಬೇಕಾಗಿದ್ದು, ರಸ್ತೆ ಸರಿಯಾಗಿಲ್ಲದ ಕಾರಣ ಹಲವು ಬಾರಿ "ವಾಹನ ದಟ್ಟಣೆ"ಯಲ್ಲಿ ಆಬ್ಯುಂಲೆನ್ಸ್ ಗಳು ಸಿಲುಕಿಕೊಳ್ಳುತ್ತಿವೆ. ಮತ್ತಿಕೆರೆಯಿಂದ ಯಶವಂತಪುರ, ಜಾಲಹಳ್ಳಿ, ಪಶ್ಚಿಮ ಕಾರ್ಡ್‌ರಸ್ತೆ, ಮಲ್ಲೇಶ್ವರಕ್ಕೆ ಹೋಗುವವರು ಇದೇ ರಸ್ತೆ ಬಳಸುತ್ತಾರೆ. ಈ ರಸ್ತೆಯ ಒಂದು ಬದಿಯಲ್ಲಿ ಕೇಂದ್ರೀಯ ವಿದ್ಯಾಲಯವಿದೆ. ಹೀಗಾಗಿ ಶಾಲಾ – ಕಾಲೇಜು, ಕಛೇರಿಗಳಿಗೆ ತೆರಳುವವರು, ಹೈರಾಣಾಗುತ್ತಾರೆ. ಧೂಳು ಅದೆಷ್ಟು ಜನರ ಶ್ವಾಸಕೋಶದ ಸಮಸ್ಯೆಗೆ ಕಾರಣವಾಗಿದೆಯೋ ಎಂದು ಈ ರಸ್ತೆಯಲ್ಲಿ ನಿತ್ಯ ಸಂಚರಿಸುವ ಸ್ಥಳೀಯ ನಿವಾಸಿಗಳ ದೂರಾಗಿದೆ. ಕಾಮಗಾರಿ ನಡೆಯುತ್ತಿರುವುದನ್ನು ಗಮನಿಸಿದರೆ, ತಕ್ಷಣದಲ್ಲಿ ರಸ್ತೆ ದುರಸ್ಥಿಯಾಗುವ ಲಕ್ಷಣಗಳು ಕಾಣುತ್ತಿಲ್ಲ. ಜನರ ಆರೋಗ್ಯ ಹಾಗೂ ವಾಹನ ಸವಾರರ ದೃಷ್ಟಿಯಿಂದ ಸಂಬಂಧಿಸಿದ ಇಲಾಖೆ ರಸ್ತೆ ದುರಸ್ಥಿ ಕಾರ್ಯವನ್ನು ತ್ವರಿತಗತಿಯಲ್ಲಿ ಕೈಗೊಳ್ಳುವ ಕುರಿತು ಪ್ರಸ್ತಾಪಿಸಿರುತ್ತಾರೆ.

**ಉತ್ತರ:**

ಬೆಂಗಳೂರು ನಗರ ಯಶವಂತಪುರದಿಂದ ಮತ್ತಿಕೆರೆ ಕಡೆಗೆ ಹೋಗುವ ಎಂ.ಎಸ್.ರಾಮಯ್ಯ ರಸ್ತೆಯಲ್ಲಿ ಕೆಪಿಟಿಸಿಎಲ್ ಸಂಸ್ಥೆಯವರು 220 ಕೆ.ವಿ ಹೊಸ ಕೇಬಲ್ ಅಳವಡಿಕೆಯ "ವಿದ್ಯುತ್ ಉನ್ನತೀಕರಣ" ಕಾಮಗಾರಿಯನ್ನು ಆದ್ಯತೆಯ ಮೇಲೆ ಕೈಗೊಂಡಿರುತ್ತಾರೆ. ಪ್ರಸ್ತುತ, ಕೇಬಲ್ ಅಳವಡಿಕೆ ಕಾಮಗಾರಿ ಪೂರ್ಣಗೊಂಡಿದ್ದು, ರಸ್ತೆಯ ಅಗೆತದ ಭಾಗದಲ್ಲಿ DBM ನಿಂದ ಡಾಂಬರೀಕರಣ ಮಾಡುವುದನ್ನು ಪ್ರಾರಂಭಿಸಿರುತ್ತಾರೆ. ಕೆಲವೊಂದು ಭಾಗಗಳಲ್ಲಿ ಕೇಬಲ್‌ಗಳ ಜೋಡಣೆ, ಕೇಬಲ್‌ಗಳ ಮಾರ್ಗಪಲ್ಲಟ ಮತ್ತು ಮುಕ್ತಾಯ ಹಂತದ ಸ್ಥಳಗಳಲ್ಲಿ ರಸ್ತೆ ಮರು/ಪುನಶ್ಚೇತನ ಕಾಮಗಾರಿ ಕೈಗೊಳ್ಳಬೇಕಾಗಿದ್ದು, ಛಾಯಾಚಿತ್ರಗಳನ್ನು ಒದಗಿಸಿದೆ. ಸದರಿ ರಸ್ತೆ ಮರು/ಪುನಶ್ಚೇತನ ದುರಸ್ಥಿ ಕಾರ್ಯವನ್ನು ಸದ್ಯದಲ್ಲಿಯೇ ಪೂರ್ಣಗೊಳಿಸುವುದಾಗಿ ಮೆ॥ ಕೆಪಿಟಿಸಿಎಲ್ ಸಂಸ್ಥೆಯವರು ತಿಳಿಸಿರುತ್ತಾರೆ.

**ಸಂಖ್ಯೆ: ನಅಇ 279 ಎಂಎನ್‌ವೈ 2025 (ಇ)**

**(ಡಿ.ಕೆ. ಶಿವಕುಮಾರ್)**
ಉಪ ಮುಖ್ಯಮಂತ್ರಿ